(19) 2

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

Registered No. B C 182

ಗೋರಕ್ಷಣ
GORAKSHANA

15 ನೇ ವರ್ಷ 1965 ನೇ ಜನವರಿ 29 January 1965

Help The 'Gorakshana'

★

"ಗೋರಕ್ಷಣ" ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ವಿಶೇಷ ಪ್ರಚಾರ ಮಾಸಪತ್ರಿಕೆ.

ವಾರ್ಷಿಕ ಚಂದಾ 50 ಪೈಸೆ. "ಗೋರಕ್ಷಣ" ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— "ಗೋರಕ್ಷಣ" ಆಫೀಸು ಚಾಮರಾಜಪೇಟೆ, ಮೈಸೂರು 4

ಕಾಮಧೇನು ಪೂಜಾ

★

ಶ್ರೀ ಅನಂತನರಸಿಂಹಯ್ಯಂಗಾರ್
ಶಾಸ್ತ್ರ ಧರ್ಮ ಪ್ರಚಾರಸಭಾ
ಹೊಂಗನೂರು

★

(ಮುಂದುವರಿದು)

ಆಹಾರಂಗಳಲ್ಲಿ ಪಾಯಸವು ಬಹಳ ಉತ್ಕೃಷ್ಟವಾದುದೆಂದು ಶಾಸ್ತ್ರಗಳು ಹೇಳುತ್ತವೆ; ಬೆಳ್ಳಗಿರುವ ಸಣ್ಣ ಅಕ್ಕಿಯನ್ನು ಉಪಯೋಗಿಸಿ ಪಾಯಸವನ್ನು ಮಾಡಿ ಅದಕ್ಕೆ ತುಪ್ಪವನ್ನು ಹಾಕಿ ಇಷ್ಟ ವಿಪ್ರರಿಗೂ ಕೊಟ್ಟು ನಾವೂ ತಿಂದರೆ, ಆ ಊಟವು ಸಾಮಾನ್ಯವಾದ ಊಟದ ಕೋಟಿ ಪಾಲು ಹೆಚ್ಚಿನದೆಂದೂ ಅದರಿಂದ ದೇವತೆಗಳಿಗೆ ತೃಪ್ತಿಯಾಗುವುದೆಂದೂ ಪದ್ಮಪುರಾಣದಲ್ಲಿ ಪ್ರಮಾಣವಿದೆ.

ಮೇಲೆ ಹೇಳಿದ ಪಾಯಸವಲ್ಲದೆ, ಶಾಸ್ತ್ರೋಕ್ತವಾದ ಕರ್ಮಾಚರಣೆಗಳಿಗಾಗಿ ಸಿದ್ಧಮಾಡಿದ ಹವಿಸ್ಸನ್ನು ಯಾವ ಸತ್ಕರ್ಮಕ್ಕಾಗಿ ಉಪಯೋಗಿಸಿ ಉಳಿದಿರುವುದೋ ಆ ಹವಿಶ್ಶೇಷವನ್ನು ತಿಂದರೆ ಆ ದೇವತಾ ಕಾರ್ಯವು ಲಕ್ಷ ಪಾಲು ಹೆಚ್ಚಿನ ಫಲ ಕೊಡುತ್ತವೆ ಯೆಂಬುದು ಶಾಸ್ತ್ರದ ನಿರ್ಣಯವಾಗಿದೆ.

ದೇವಪುರೋಹಿತನಾದ ಬೃಹಸ್ಪತಿಯಂತೆಯೂ, ಲಕ್ಷ್ಮೀಪತಿಯಾದ ನಾರಾಯಣನಂತೆಯೂ ಹಸುವು ನಮಸ್ಕರಿಸಲ್ಪಡತಕ್ಕುದು ಮತ್ತು ಪೂಜಿಸಲ್ಪಡತಕ್ಕುದು; ಕಾಮಧೇನುವಿನ ಸೇವೆಯಿಂದಲೇ ಇಂದ್ರನು ಅಮರಾವತಿಯ ಐಶ್ವರ್ಯಗಳನ್ನೂ ಅಷ್ಟ ದಿಕ್ಪಾಲಕರುಗಳಲ್ಲಿ ಅಗ್ರೇಸರನಾಗಿ ಅಗ್ರತಃ ಪೂಜ್ಯನಾಗಿರುವನು.

ಯಾವ ಮಾನವನು ಪ್ರಾತಃಕಾಲದೊಳಗೆ ಎದ್ದು ಪಾತ್ರೆಯ ಶುಂಚಾ ಶುದ್ಧವಾದ ನೀರನ್ನು ತುಂಬಿಕೊಂಡು ಗೋವಿನ ಕೊಂಬುಗಳನ್ನು ತೊಳೆದು ಆ ನೀರನ್ನು ತಲೆಗೆ ಪ್ರೋಕ್ಷಿಸಿಕೊಂಡು ಎಂದು ಉಪವಾಸವಿರುತ್ತಾನೋ ಆ ದಿನದ ಅವನ ಪುಣ್ಯತೆಷ್ಟೆಂಬುದನ್ನು ಹೇಳುವುದೇ ಸಂತೋಷಕರ. ಲೋಕದಲ್ಲಿ ಸಿದ್ಧರೂ, ಬ್ರಾಹ್ಮಣರೂ, ಮಹರ್ಷಿಗಳೂ ಎಷ್ಟು ತೀರ್ಥಗಳನ್ನು ಸೇವಿಸಿರುವರೋ ಅ ಎಲ್ಲಾ ತೀರ್ಥಸ್ನಾನದಿಂದ ಪಡೆದಿರಬಹುದಾದಷ್ಟು ಪುಣ್ಯವನ್ನು ಪ್ರಾತಃಕಾಲದಲ್ಲಿ ಗೋವಿನ ಕೊಂಬನ್ನು ತೊಳೆದ ನೀರಿನ ಪ್ರೋಕ್ಷಣೆಯಿಂದ ಪಡೆಯಬಹುದಾಗಿದೆ

ಯಾವನು ಬೆಳಿಗ್ಗೆ ಹಾಸಿಗೆಯಿಂದ ಎದ್ದು ಗೋವು, ತುಪ್ಪ, ಜೇನು, ಬಿಳಿ ಸಾಸುವೆ, ನವಣೆ ಇವುಗಳನ್ನು ಮುಟ್ಟುತ್ತಾನೋ ಆತನ ಪಾಪಗಳೆಲ್ಲಾ ಪರಿಹಾರವಾಗುತ್ತದೆ

ಹಸುಗಳು ಹಾಲು ತುಪ್ಪವನ್ನು ಕೊಡುತ್ತವೆ. ತುಪ್ಪವು ಉತ್ಪತ್ತಿ ಆಗಲು ಕಾರಣವಾದ ತುಪ್ಪದ ನದಿ ಆಗಿರುವ ತುಪ್ಪದ ಮಡು ಆಗಿರುವ ಗೋವುಗಳು ನನ್ನ ಮನೆಯಲ್ಲಿ ಯಾವಾಗಲೂ ಇರಲಿ ನನ್ನ ಶರೀರದಲ್ಲೂ ಮನಸ್ಸಿನಲ್ಲಿಯೂ ಮನಸ್ಸಿನಲ್ಲಿಯೂ ತುಪ್ಪವು ನೆಲೆಯಾಗಿರಲಿ ನಿತ್ಯವೂ ನನ್ನ ಮುಂದೆಯೂ ಹಿಂದೆಯೂ ಹಸುಗಳು ಓಡಾಡುತ್ತಿರಲಿ ಗೋವಿನ ಸ್ಮರಣೆಯೆಂಬುದು ನನ್ನ ಶರೀರದಲ್ಲೆಲ್ಲ ವ್ಯಾಪಿಸಿರಲಿ ಯಾವಾಗಲು ಗೋವಿನ ಮಧ್ಯದಲ್ಲೇ ನನಗೆ ವಸತಿಯಾಗಿರಲಿ—ಎಂಬ ಮಂತ್ರ ಆಚಮನಮಾಡಿ ಶಚಿರ್ಭೂತನಾಗಿ ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಜಪ ಮಾಡುತ್ತಿದ್ದು ಅದರಂತೆ ಆಚರಿಸುತ್ತಿರುವ ಮನುಜನ ಸಮಸ್ತ ಪಾಪಗಳೂ ಪರಿಹಾರವಾಗಿ ಸ್ವರ್ಗಲೋಕದಲ್ಲಿಯೂ ಪೂಜಿಸಲ್ಪಡುವನು.

ಗೋವಿನಂತೆ ವಿಪ್ರನು ವಿಪ್ರನಂತೆ ಹರಿಯೂ ಹರಿಯಂತೆ ಗಂಗೆಯೂ ಪರಮ ಪೂಜ್ಯರು. ಇವರಿಗೆ ಪಾಪಗಳೆಂಬುದೇ ಇಲ್ಲ: ಯಾವಾಗಲೂ ಇವರು ಪುಣ್ಯವಂತರೇ ಆಗಿರುವರು. [ಸಶೇಷ

★

ಅಹಿಂಸಾ ಆಚರಣೆ ಬೋಧಿಸಿದ ಗಾಂಧಿಯವರ ರಾಜ್ಯದಲ್ಲಿ —

ಪುಣ್ಯ ಸ್ಥಳ ತಿರುಪತಿಯಲ್ಲಿ ವಧಾ ಗೃಹ

ದೇಶದಲ್ಲಿ ಬ್ರಿಟಿಷ್ ವಧಾ ನಿಪುಣರ ಪ್ರವಾಸ

ತಿರುಪತಿಯಿಂದ ಬಂದಿರುವ ವರ್ತಮಾನವಿದು— ಬ್ರಿಟಿಷ್ನಿನ ವಧಾಗೃಹ ನಿಪುಣರಾದ ಮಿ|| ವೇಲರು: ಈಚೆಗೆ ಅಲ್ಲಿ ತಿಳಿಸಿದ ವಿಷಯ— ಭಾರತದಲ್ಲಿ 10 ಲಕ್ಷಕ್ಕೆ ಮೇಲ್ಪಟ್ಟ ಜನಸಂಖ್ಯೆಯಿರುವ ಪಟ್ಟಣಗಳಲ್ಲಿ ನವೀನ ರೀತಿಯ ವಧಾಗೃಹಗಳನ್ನು ಏರ್ಪಡಿಸಲು ಯೋಚನೆಯಾಗಿದೆ — ಈ ಕಾರ್ಯವು ಶೇಕಡ 50 ಗ್ರಾಂಟು ಮತ್ತು 50 ಸರ್ಕಾರಿ ಸಾಲದಿಂದ ನಡೆಸಲಾಗುವುದು — ಹೈದರಾಬಾದಿನ ಸನತನಗರದಲ್ಲಿ ಈ ಕಾರ್ಯಕ್ಕೆ 100 ಎಕ್ರೆ ಭೂಮಿ ಆರಿಸಲಾಗಿದೆ, ಮತ್ತು ರೂ 1-65 ಕೋಟಿ ವ್ಯಯದ ವಧಾಗೃಹ ಸ್ಥಾಪಿಸಲಾಗುವುದು — ಮದರಾಸಿನಲ್ಲಿ ಪೆರಂಬೂರು ವಧಾಗೃಹವು ನವೀನಪಡಿಸಲಾಗುವುದು, ಎಂದು ತಿಳಿಸಿರುವರು.

20 ವರ್ಷಗಳ ಹಿಂದೆ ಬಂದಿದ್ದ ಈ ನಿಪುಣರು ಈಗಿನ ಪರಿಸ್ಥಿತಿಗಳನ್ನು ನೋಡಿ, ಅನೇಕ ರೀತಿ ಅಭಿವೃದ್ಧಿಗೊಂಡಿರುವುದೆಂದಿರುವರು.

ಅವರು ಮತ್ತೂ ತಿಳಿಸಿರುವರು— ವಧಾಗೃಹವು ಒಂದು ದೊಡ್ಡ ಕೈಗಾರಿಕೆಯಾಗಿದ್ದು ವಿದೇಶೀ ವಿನಿಮಯ ಸಂಪಾದಿಸುವುದಾಗಿದೆ — ವಿದೇಶಗಳಲ್ಲಿ ಭಾರತದ ಮಾಂಸಕ್ಕೆ ಒಳ್ಳೇ ಕೇಳಿಕೆ ಇದೆ, ಎ ದಿರ ವರು.

ಇವರು ಈಗಾಗಲೇ ಅಹಮದಾಬಾದು, ಜಯಪುರ, ಹೈದರಾಬಾದು, ಮದರಾಸುಗಳಿಗೆ ಭೇಟಿ ಕೊಟ್ಟಿರುವರು: ಬೆಂಗಳೂರಿಗೆ ಮುಂದಿನ ತಿಂಗಳಲ್ಲಿ ಭೇಟಿ ಕೊಡಲಿರುವರು.

ತಿರುಪತಿಯಲ್ಲಿ ಕೇವಲ 40 ಸಾವಿರ ಜನಸಂಖ್ಯೆ ಇದ್ದರೂ ಅಲ್ಲೊಂದು ವಧಾಗೃಹ ಸ್ಥಾಪಿಸಲು ಸಲಹೆ ಮಾಡಲಾಗಿದೆಯಂತೆ!

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನ ಮಹಾವಿದ್ವಾನ್, ಧರ್ಮಾಧಿಕಾರಿ
ರಂಜಕಾಚಾರ್ಯಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರವರಿಂದ ಸ್ಥ
30 ಶನಿವಾರ ತ್ರ ಪೂಷಾ

★

ಸರ್ವೋದಯ ದಿನಾಚರಣೆ ಪ್ರಯುಕ್ತ ನಾಳೆ ಸತ್ಯವಾದಿಗೆ ರಜ

★

ಮಂತ್ರಿ ಪದವಿ

ಪ್ರತಿ ರೈತನೂ ಒಂದೊಂದು ಪಲ್ಲ ಹೆಚ್ಚಿಗೆ ಆಹಾರ ಧಾನ್ಯ ಬೆಳೆದರೆ ದೇಶದಲ್ಲಿ ಆಹಾರ ಸ್ವಾವಲಂಬನೆ ಆಗುವುದೆಂದು ವ್ಯವಸಾಯ ಮಂತ್ರಿ ಶ್ರೀ ನಾರಾಯಣಗೌಡರು ದೇವನಹಳ್ಳಿಯಲ್ಲಿ ನುಡಿದರು

ಅಹಿಂಸೋ ಸರಮಧರ್ಮಃಕೆ

ಹತ್ಯಾಕಾಂಡವು ನರಕಭೂಮಿ
ಪ್ರಾಣಿದಯಾ ಭೂಮಿಯು ಸ್ವರ್ಗಭೂಮಿ

ಭಾರತವು ದಯಾಮಯವಾದ ಪುಣ್ಯಭೂಮಿ : ಇಂತಹ ಭೂಮಿಯಲ್ಲಿ ವಾಸಮಾಡುವ ನಾವು ಧನ್ಯರು ಹೇಯವಾದ ಹತ್ಯಾಕಾಂಡವನ್ನು ನಾಶ ಮಾಡಿ, ದಯಾಮಯವಾದ ಧರ್ಮವನ್ನು ಸ್ಥಾಪಿಸಲು ಭಗವಂತನು ಆಗಾಗ ನಮ್ಮ ಭೂಮಿಯಲ್ಲಿ ಅವತಾರ ಮಾಡಿರುವನು : ಇಂತಹ ಭೂಮಿಯಲ್ಲಿ ಜನ್ಮವೆತ್ತಿ ವಾಸ ಮಾಡುವ ಮೃಗ ಪಕ್ಷಿ ಪಶು ಪ್ರಾಣಿಗಳು ನಿರ್ಭಯವಾಗಿ ವಾಸಿಸಿ ಜನಸೇವೆಯನ್ನು ಮಾಡಿ ಮಡಿಯುತ್ತವೆ : ಹೀಗಿರುವಾಗ ನಾವು ಎಲ್ಲಾ ಪ್ರಾಣಿಗಳಲ್ಲೂ ದಯೆಯಿಟ್ಟು ಸಾಕಿ ಸಲಹಿ ಅವುಗಳಿಂದ ಸೇವೆ ತೆಗೆದುಕೊಳ್ಳಬೇಕು ; ಈ ಹತ್ಯಾಕಾಂಡವನ್ನು ಪ್ರಪಂಚದಲ್ಲೇ ತಪ್ಪಿಸಬೇಕೆಂದು ಬುದ್ಧದೇವನ ಅವತಾರವಾಯಿತು ; ಅವನ ಧರ್ಮ ಪಾಲಕನಾದ ಅಶೋಕ ಚಕ್ರವರ್ತಿಯು ಅಖಂಡ ಭಾರತವನ್ನು ಆಳಿ ಧರ್ಮವು ರಾಜಶಾಸನವಾಗಿ ಉಳಿಯುವಂತೆ ಮಾಡಿ ಹೋದನು : ತನ್ನ ಆಳ್ವಿಕೆಯಲ್ಲಿ ಪ್ರಾಣಿಹಿಂಸೆ ಮಾಡಿದವರಿಗೆ ಕ್ರೂರ ಶಿಕ್ಷೆ ಮಾಡುತ್ತಿದ್ದನು.

ಅತಿಂತರ ನಮ್ಮ ಪುಣ್ಯಭೂಮಿಯು ಪರಪೇಯರ ಆಡಳಿತಕ್ಕೆ ಸಿಕ್ಕಿ ಧರ್ಮವನ್ನೇ ಮರೆಯಬಿಟ್ಟಿತು : ಈಚೆಗೆ ಧರ್ಮಕರ್ಮ ಸಂಯೋಗದಿಂದ ಅವತಾರ ಪುರುಷರಾದ ಪೂಜ್ಯ ಗಾಂಧಿಯವರಿಂದ ನಮ್ಮ ದೇಶವು ನಮ್ಮದೇ ಆಗಿ ಸ್ವತಂತ್ರವಾಯಿತು ; ಅಶೋಕನ ಧರ್ಮಶಾಸನದ ಮೇಲೆ ಘನ ಸರಕಾರವು ಆಳುತ್ತಿದೆ : ಸತ್ಯ ಶಾಂತಿ, ದಯೆ, ಸಮತ್ವ, ಸಾವಿಚಾರಗಳೇ ಇಂದಿನ ರಾಜನೀತಿಯಾಗಿದೆ ; ಹೀಗಿದ್ದೂ ದೇಶದ ಅನೇಕ ಕಡೆಗಳಲ್ಲಿ ಪ್ರಾಣಿದಯಾಸಂಘಗಳು ಸ್ಥಾಪಿತವಾಗಿ ಪ್ರಾಣಿಸೇವೆ ಮಾಡುತ್ತಿವೆ, ಹೀಗಿದ್ದೂ ಘನಸರ್ಕಾರ ಈ ಭಾಗದಲ್ಲಿ ಅಲಕ್ಷ್ಯ ಮಾಡುತ್ತಾ, ಪೋತ್ಸಾಹವನ್ನೇ ಕೊಡದೆ ಮೌನವಾಗಿದೆ.

ಇದರಿಂದಾಗಿ ನಮ್ಮ ದೇಶದಲ್ಲಿ ದೇವರ ಘಸರಿನಲ್ಲಿ ಪ್ರಾಣಿಗಳ ವಧೆಯಾಗುವುದೂ ಅನ್ಯಾಹಾರ ಮಾಡುವವರ ಸಂಖ್ಯೆಯೂ ಹೆಚ್ಚಾಗಿ ಕಟುಕರಂಗಡಿಗ ದಿನೇ ದಿನೇ ಹೆಚ್ಚುತ್ತಿರುವುದೂ ನೋಡಿದರೆ ತುಂಬಾ ವ್ಯಸನವಾಗುವುದು : ಸಾರ್ವಜನಿಕರೂ ಸರಕಾರವೂ ಇತ್ತಕಡೆ ಹೆಚ್ಚು ಗಮನ ಕೊಟ್ಟು, ಪಶು ಪಕ್ಷಿ ಪ್ರಾಣಿಗಳ ವಧೆಯಾಗದಂತೆ ಭಾರತಾದ್ಯಂತ ಧರ್ಮವನ್ನು ಉದ್ಧರಿಸಲು ಪ್ರಾರ್ಥಿಸುತ್ತೇನೆ.

ಬಿ ಜಿ ಶಾಸ್ತ್ರಿ, ವಿದ್ಯಾರಣ್ಯಪುರ, ಮೈಸೂರು.

ಆಕಳಿಗೆ ಆನಂದದ ಸುದ್ದಿ

ಪಶ್ಚಿಮ ಬರ್ಲಿನ್ (ಡಾಡ್)— ನಮ್ಮ ಕವಾಡಿಗರಿಗೆ ತಮ್ಮ ಹಸುಗಳು ಹೆಚ್ಚು ಹಾಲನ್ನು ಕೊಡಬೇಕೆನ್ನುವುದು ಗೊತ್ತೇ ವಿನಹಾ ಅವನ್ನು ಯಾವ ರೀತಿ ಸಂರಕ್ಷಿಸಬೇಕು ಎನ್ನುವುದು ತಿಳಿಯದು : ಇಂತಹವರಿಗಾಗಿಯೇ ಪಶ್ಚಿಮ ಬರ್ಲಿನಲ್ಲಿ ಸಮ್ಮೇಳನವೊಂದು ನಡೆಯಿತು : ಹಸುಗಳನ್ನು ಹೇಗೆ ನೋಡಿಕೊಳ್ಳಬೇಕು. ಅವುಗಳು ಪುಷ್ಟವಾಗಿ ಬೆಳೆಯಲು ಏನು ಕೊಡಬೇಕು ಎಂಬೆಲ್ಲ ವೆಷಯಗಳನ್ನೂ ಇಲ್ಲಿ ಚರ್ಚಿಸಲಾಯಿತು ; ಈ ಸಮ್ಮೇಳನದಲ್ಲಿ ಏಷ್ಯಾದ ದೇಶಗಳೂ ಮಧ್ಯ ಪ್ರಾಚ್ಯದ ದೇಶಗಳೂ ಭಾಗವಹಿಸಿದ್ದವು. (ಯೂ ಪಿ ಎಸ್)

ಗೋರಕ್ಷಣ ವ್ಯವಸ್ಥಾಪಕರ ವಿನಂತಿ

ಚಂದಾ ವಾಯಿದೆ ಮುಗಿದಿರುವವರು ದಯಮಾಡಿ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು,
ಶ್ರೀ ಬಿ ಜಿ ಶಾಸ್ತ್ರಿಗಳು (ದ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತಸಂಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಂಗನೂರು
ಗೋರಕ್ಷಣ ಆಫೀಸು, "ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು 4

ವುಡ್‌ಲ್ಯಾಂಡ್ಸ್ 22-1-65 ರಿಂದ

ಅಮೋಘ ಆರಂಭ

ಬೊಂಬಾಯಿ ನಲ್ಲಿ ಈಗ ಯಶಸ್ವಿಯಾಗಿ 13 ನೇ ವಾರದಲ್ಲಿ ನಡೆಯುತ್ತಿರುವ ಅಚ್ಚುಮೆಚ್ಚಿನ ಕಿಶೋರ್ ಫಿಲಂಸ್ ರವರ ಮನಮೋಹಕ ಹಿಂದಿ ಚಿತ್ರ

ದೂರ್‌ಗರ್ಗ್ ಕಿ ಚಾವ್‌ಮೇ

ಪಾತ್ರ— ಕಿಶೋರಕುಮಾರ್, ಸುಪ್ರಿಯಾ ಚೌಧರಿ, ಮತ್ತು ಅಮಿತ ಗಂಗೋಲಿ

[ದಿನವಹಿ 3 ಪ್ರದರ್ಶನಗಳು]

ಆಪೆರಾ— 28-1-65 ರಿಂದ

ತಾಯಿಕ್ಕು ಪಿನ್ ತಾರಂ

ತಮಿಳು

ಎಂ. ಜಿ. ರಾಮಚಂದ್ರನ್ ಭಾನುಮತಿ ಬಾಲಯ್ಯ ಕನ್ನಾಂಬ

[ದಿನ 3 ಆಟಗಳು]

ಆಶೋಕಾ ಏಜೆನ್ಸೀಸ್

ಲ್ಯಾನ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ನಮ್ಮಲ್ಲಿ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.
ಎಲ್ಲಾ ಖಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

SHAKTI SUDHA

Superb Tonic



ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Edited, Printed & Published by the Proprietor
Dharma Prachara Nirata M. S. Krishna Rao
the Satyavadi Press, Chamarajapuram, Mysore 4